# ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ. ದ. ನ್ಯಾ.ದಂ.ನ್ಯಾಯಾಲಯ,

# ಶಹಾಪೂರ

ಸಿ.ಡಬ್ಲ್ಯೂ. 5 ಪಿ.ಡಬ್ಲ್ಯೂ. 3

ಸಿ.ಸಿ. ನಂ. 59/2021

| | |
|---|---|
| ಹೆಸರು | ಃ ಜಂಬಣ್ಣ |
| ತಂದೆಯ ಹೆಸರು | ಃ ಮಲ್ಲಿಕಾರ್ಜುನ ಹಡಪದ |
| ವಯಸ್ಸು | ಃ 22 ವರ್ಷ |
| ಉದ್ಯೋಗ | ಃ ಕಟಿಂಗ್ ಶಾಪ್ ಕೆಲಸ |
| ವಾಸ | ಃ ಭೀ ಗುಡಿ, ತಾಃ ಶಹಾಪೂರ |

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು ದಿನಾಂಕಃ 01-02-2025.

ಮುಖ್ಯ ವಿಚಾರಣೆ ಃ ಸಹಾಯಕ ಸರಕಾರಿ ಅಭಿಯೋಜಕರವರಿಂದ ಃ

ಚಾಸಾ-4 ರವರ ಪರಿಚಯ ಇರುತ್ತದೆ.

ಈ ಹಂತದಲ್ಲಿ ಸಾಕ್ಷಿಗೆ ಮಶಿನ್ ಜಪ್ತಿ ಪಂಚನಾಮೆ ತೋರಿಸಲಾಗಿ ಸಾಕ್ಷಿಯು ಅದರ ಮೇಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ.7 ಎಂದು. ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ.7(ಬಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಅಂದಾಜು 1 ½ ವರ್ಷದ ಹಿಂದೆ ಭೀ-ಗುಡಿ ಠಾಣೆಯಲ್ಲಿ ಪೊಲೀಸರು ಹೇಳಿದ ಮೇರೆಗೆ ಮಾಡಿರುತ್ತೇನೆ. ನಿ.ಪಿ.7 ರಲ್ಲಿ ಬರೆದಿರುವ ವಿಷಯ ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಪೊಲೀಸರು ಯಾವುದೇ ಪಂಚನಾಮೆಯನ್ನು ಮಾಡಿಲ್ಲ ಹಾಗೂ ಯಾವುದೇ ವಸ್ತುಗಳನ್ನು ಜಪ್ತಿಪಡಿಸಿಕೊಂಡಿಲ್ಲ. ಈ ಹಂತದಲ್ಲಿ ಸಾಕ್ಷಿಗೆ ಎರಡು ಪೊಟೋಗಳನ್ನು ತೋರಿಸಿದಾಗ ಅದರಲ್ಲಿ ತಾನು ಇರುವುದಾಗಿ ಸಾಕ್ಷಿ ನುಡಿದಿರುತ್ತಾನೆ. ಸದರಿ ಪೊಟೊಗಳನ್ನು ಈಗಾಗಲೇ ನಿಪಿ.8 ಮತ್ತು 9 ಎಂದು ಗುರುತಿಸಲಾಗಿದೆ. ಸದರಿ ಪೊಟೋಗಳನ್ನು ಎಲ್ಲಿ ಮತ್ತು ಯಾವಾಗ ತೆಗೆಯಲಾಗಿದೆ ಎಂದು ನನಗೆ ಗೊತ್ತಿಲ್ಲ. ಸದರಿ ಪೊಟೋದಲ್ಲಿ ನಾನು, ಚಾಸಾ4 ಮತ್ತು ಇಬ್ಬರು ಪೊಲೀಸ್ ಸಿಬ್ಬಂದಿಗಳು ಇರುತ್ತಾರೆ ಅವರು ಯಾರು ಎಂದು ನನಗೆ ಗೊತ್ತಿಲ್ಲ. ಸದರಿ ನಿಪಿ.8

ಮತ್ತು 9 ಪೊಟೋಗಳನ್ನು ಒಂದು ಮನೆಯಲ್ಲಿ ತೆಗೆದಿರುತ್ತಾರೆ ಅದು ಯಾರ ಮನೆ ಎಂದು ನನಗೆ ಗೊತ್ತಿಲ್ಲ. ಸದರಿ ನಿಪಿ.8 ಮತ್ತು 9 ಪೊಟೋಗಳಲ್ಲಿ ಕಾಣುತ್ತಿರುವ ಹೆಣ್ಣು ಮಗಳು ಯಾರು ಎಂದು ನನಗೆ ಗೊತ್ತಿಲ್ಲ. ಸದರಿ ನಿಪಿ.8 ಮತ್ತು 9 ಪೊಟೋಗಳಲ್ಲಿ ಕಾಣುತ್ತಿರುವ ಮಶೀನ್ ಯಾರಿಗೆ ಸಂಬಂದಿಸಿದ್ದು ಎಂದು ನನಗೆ ಗೊತ್ತಿಲ್ಲ. ಅದು ಯಾವ ಮಶೀನ್ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಸದರಿ ನಿಪಿ.8 ಮತ್ತು 9 ಪೊಟೋಗಳಲ್ಲಿ ಕಾಣುವ ಮಶೀನನ್ನು ಪೊಲೀಸರು ಜಪ್ತಿಪಸಿಡಿಕೊಂಡಿರುವುದಿಲ್ಲ.

2. ಈ ಹಂತದಲ್ಲಿ ಸಾಕ್ಷಿಗೆ ಗುನ್ನಾ ಸ್ಥಳ ಪಂಚನಾಮೆ ತೋರಿಸಲಾಗಿ ಸಾಕ್ಷಿಯು ಅದರ ಮೇಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ.10 ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ.10(ಬಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಅಂದಾಜು 1 ½ ವರ್ಷದ ಹಿಂದೆ ಭೀ-ಗುಡಿ ಠಾಣೆಯಲ್ಲಿ ಪೊಲೀಸರು ಹೇಳಿದ ಮೇರೆಗೆ ಮಾಡಿರುತ್ತೇನೆ. ನಿ.ಪಿ.10 ರಲ್ಲಿ ಬರೆದಿರುವ ವಿಷಯ ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಪೊಲೀಸರು ಯಾವುದೇ ಪಂಚನಾಮೆಯನ್ನು ಮಾಡಿರುವುದಿಲ್ಲ.

**(ಈ ಹಂತದಲ್ಲಿ ಸ.ಸ.ಅ. ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದರು. ಅನುಮತಿ ಕೊಟ್ಟಿದೆ)**

**ಪಾಟೀ ಸವಾಲುಃ ಸ.ಸ.ಅ. ರವರಿಂದಃ**

3. ದಿಃ 17-08-2020 ರಂದು ಮದ್ಯಾಹ್ನ 2.45 ಗಂಟೆ ಸಮಯದಲ್ಲಿ ನನಗೆ ಪೊಲೀಸರು ಕರೆದು 3 ನೇ ಆರೋಪಿ ಶ್ರೀಮತಿ ಸುಜಾತಾ ಇವರ ಮನೆಯಲ್ಲಿ ಪಂಚನಾಮೆ ಮಾಡಲು ಹೋಗಲು ಬರುವಂತೆ ಕರೆದಿದ್ದರು ಎಂದರೆ ಸರಿ. ಅಲ್ಲಿ ಪೊಲೀಸರು 3 ನೇ ಆರೋಪಿತರ ಮನೆಗೆ ಪಂಚನಾಮೆ ಮಾಡಲು ಕರೆದುಕೊಂಡು ಹೋದರು ಎಂದರೆ ಸರಿ. ಅಲ್ಲಿ ಪೊಲೀಸರು ಚೀಲ ಹೊಲೆಯುವ ಒಂದು ಮಶಿನ್ ನ್ನು ಜಪ್ತಿಪಸಿಡಿಕೊಂಡು ಪೂಟೊ ತೆಗೆದಿರುತ್ತಾರೆ ಎಂದರೆ ಸರಿ. ನನ್ನ ಮತ್ತು ಚಾಸಾ 4 ರವರ ಸಮಕ್ಷಮ

ಮದ್ಯಾಹ್ನ 2.45 ರಿಂದ 3.15 ರವರಗೆ ಜಪ್ತಿ ಪಂಚನಾಮೆ ತಯಾರಿಸಿದ್ದರು ಎಂದರೆ ಸರಿಯಲ್ಲ. ಸದರಿ ಪಂಚನಾಮೆಯನ್ನು ಪೊಲೀಸರು ನನಗೆ ಓದಿ ಹೇಳಿದ ನಂತರ ನಾನು ಸ್ತಳದಲ್ಲಿ ಸಹಿ ಹಾಕಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಜಪ್ತಿ ಪಂಚನಾಮೆಯ ಎಲ್ಲಾ ವಿಷಗಳು ಗೊತ್ತಿದ್ದರೂ ಕೂಡ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

4. ಅದೆ ದಿನ ನನ್ನ ಮತ್ತು ಚಾಸಾ 4 ರವರ ಸಮಕ್ಷಮ ಮದ್ಯಾಹ್ನ 3.20 ರಿಂದ 3.50 ರವರೆಗೆ 3 ನೇ ಆರೋಪಿತರ ಮನೆಯಲ್ಲಿ ಗುನ್ನಾ ಸ್ತಳದ ಕಚ್ಚಾ ನಕಾಶೆಯನ್ನು ತಯಾರಿಸಿ ಗುನ್ನಾ ಸ್ತಳ ಪಂಚನಾಮೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಪಂಚನಾಮೆಯನ್ನು ಪೊಲೀಸರು ನನಗೆ ಓದಿ ಹೇಳಿದ ನಂತರ ನಾನು ಸ್ತಳದಲ್ಲಿಯೇ ಸಹಿ ಹಾಕಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಗುನ್ನಾ ಸ್ತಳದ ಪಂಚನಾಮೆಯ ಎಲ್ಲಾ ವಿಷಗಳು ಗೊತ್ತಿದ್ದರೂ ಕೂಡ ಆರೋಪಿರಿಗೆ ಸಹಾಯ ಮಾಡಲು ನನ್ನ ಸಮಕ್ಷಮದಲ್ಲಿ ಗುನ್ನಾ ಸ್ತಳ ಪಂಚನಾಮೆ ಮಡಿರುವುದಿಲ್ಲ ಎಂದು ಹೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟಿ ಸವಾಲು ಆರೋಪಿಗಳ ಪರವಾಗಿಃ-**

5. 3 ನೇ ಆರೋಪಿತರ ಮನೆ ಎಲ್ಲಿ ಇರುತ್ತದೆ ಎಂದು ನನಗೆ ಗೊತ್ತಿಲ್ಲ. ಆ ದಿನ ಪೊಲಪಿಸರು ನನಗೆ ಕರೆದುದೂಂಡು ಹೋದ ಮನೆ ಯಾರಿಗೆ ಸೇರಿದ್ದು ಎಂದು ನನಗೆ ಗೊತ್ತಿಲ್ಲ. ಆ ಮನೆಯಲ್ಲಿ ಯಾರು ಯಾರು ಇದ್ದರು ಎಂದು ನನಗೆ ಗೊತ್ತಿಲ್ಲ. ನಿಪಿ.8 ಮತ್ತು 9 ಲ್ಲಿ ಕಾಣುತ್ತಿರುವ ಮಶಿನ್ ಯಾವ ಕೆಲಸಕ್ಕೆ ಉಪಯೋಗಿಸುವ ಮಶಿನ್ ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ಮಶಿನ ನನ್ನ ಸಮ ಕ್ಷಮದಲ್ಲಿ ಜಪ್ತಿಪಸಿಡಿಕೊಂಡಿರುತ್ತಾರೆ ಎಂದು ಹೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ.8 ಮತ್ತು 9 ಪೊಟೊಗಳನ್ನು ಯಾವ ಕಾರಣಕ್ಕಾಗಿ ತೆಗೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

**ಮರು ವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಶಹಾಪೂರ.

# ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ. ದ. ನ್ಯಾ.ದಂ.ನ್ಯಾಯಾಲಯ,

## ಶಹಾಪೂರ

ಸಿ.ಡಬ್ಲ್ಯೂಯ. 4 ಪಿ.ಡಬ್ಲ್ಯೂಯ. 2

ಸಿ.ಸಿ. ನಂ. 59/2021

| | |
|---|---|
| ಹೆಸರು | ಃ ಮಕ್ಬೂಲ್ |
| ತಂದೆಯ ಹೆಸರು | ಃ ರಾಜೆಸಾಬ್ ಚೌದರಿ |
| ವಯಸ್ಸು | ಃ 32 ವರ್ಷ |
| ಉದ್ಯೋಗ | ಃ ಹೊಟೇಲ ಕೆಲಸ |
| ವಾಸ | ಃ ಭೀ ಗುಡಿ, ತಾಃ ಶಹಾಪೂರ |

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು ದಿನಾಂಕಃ 01-02-2025.
ಮುಖ್ಯ ವಿಚಾರಣೆ ಃ ಸಹಾಯಕ ಸರಕಾರಿ ಅಭಿಯೋಜಕರವರಿಂದ ಃ

-

ಚಾಸಾ-5 ರವರ ಪರಿಚಯ ಇರುತ್ತದೆ.

ಈ ಹಂತದಲ್ಲಿ ಸಾಕ್ಷಿಗೆ ಮಶಿನ್ ಜಪ್ತಿ ಪಂಚನಾಮೆ ತೋರಿಸಲಾಗಿ ಸಾಕ್ಷಿಯು ಅದರ ಮೇಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.7 ಎಂದು ಗುರುತಿಸಲಾಯಿತು. ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ.7(ಎ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಅಂದಾಜು 1 ½ ವರ್ಷದ ಹಿಂದೆ ಭೀ-ಗುಡಿ ಠಾಣೆಯಲ್ಲಿ ಪೊಲೀಸರು ಹೇಳಿದ ಮೇರೆಗೆ ಮಾಡಿರುತ್ತೇನೆ. ನಿ.ಪಿ.7 ರಲ್ಲಿ ಬರೆದಿರುವ ವಿಷಯ ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಪೊಲೀಸರು ಯಾವುದೇ ಪಂಚನಾಮೆಯನ್ನು ಮಾಡಿಲ್ಲ ಹಾಗೂ ಯಾವುದೇ ವಸ್ತುಗಳನ್ನು ಜಪ್ತಿಪಡಿಸಿಕೊಂಡಿಲ್ಲ. ಈ ಹಂತದಲ್ಲಿ ಸಾಕ್ಷಿಗೆ ಎರಡು ಪೊಟೋಗಳನ್ನು ತೋರಿಸಿದಾಗ ಅದರಲ್ಲಿ ತಾನು ಇರುವುದಾಗಿ ಸಾಕ್ಷಿ ನುಡಿದಿರುತ್ತಾನೆ. ಸದರಿ ಪೊಟೊಗಳನ್ನು ನಿಪಿ.8 ಮತ್ತು 9 ಎಂದು ಗುರುತಿಸಲಾಯಿತು. ಸದರಿ ಪೊಟೋಗಳನ್ನು ಎಲ್ಲಿ ಮತ್ತು ಯಾವಾಗ ತೆಗೆಯಲಾಗಿದೆ ಎಂದು ನನಗೆ ಗೊತ್ತಿಲ್ಲ. ಸದರಿ ಪೊಟೋದಲ್ಲಿ ನಾನು, ಚಾಸಾ5 ಮತ್ತು ಪೊಲೀಸ್ ಸಿಬ್ಬಂದಿ ಜಿಂದಾವಲ್ಲಿ ಇರುತ್ತೇವೆ. ಸದರಿ ಪೋಟೋದಲ್ಲಿ ಇರುವ

ಇನ್ನೊಬ್ಬ ಪೊಲಿಸ್ ಸಿಬ್ಬಂದಿ ಯಾರು ಎಂದು ನನಗೆ ಗೊತ್ತಿಲ್ಲ. ಸದರಿ ನಿಪಿ.8 ಮತ್ತು 9 ಪೊಟೋಗಳನ್ನು ಒಂದು ಮನೆಯಲ್ಲಿ ತೆಗೆದಿರುತ್ತಾರೆ ಅದು ಯಾರ ಮನೆ ಎಂದು ನನಗೆ ಗೊತ್ತಿಲ್ಲ. ಸದರಿ ನಿಪಿ.8 ಮತ್ತು 9 ಪೊಟೋಗಳಲ್ಲಿ ಕಾಣುತ್ತಿರುವ ಹೆಣ್ಣು ಮಗಳು ಯಾರು ಎಂದು ನನಗೆ ಗೊತ್ತಿಲ್ಲ. ಸದರಿ ನಿಪಿ.8 ಮತ್ತು 9 ಪೊಟೋಗಳಲ್ಲಿ ಕಾಣುತ್ತಿರುವ ಮಶೀನ್ ಯಾರಿಗೆ ಸಂಬಂದಿಸಿದ್ದು ಎಂದು ನನಗೆ ಗೊತ್ತಿಲ್ಲ. ಅದು ಯಾವ ಮಶೀನ್ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಸದರಿ ನಿಪಿ.8 ಮತ್ತು 9 ಪೊಟೋಗಳಲ್ಲಿ ಕಾಣುವ ಮಶೀನನ್ನು ಪೊಲೀಸರು ಜಪ್ತಿಪಸಿಡಿಕೊಂಡಿರುವುದಿಲ್ಲ.

2. ಈ ಹಂತದಲ್ಲಿ ಸಾಕ್ಷಿಗೆ ಗುನ್ಹಾ ಸ್ಥಳ ಪಂಚನಾಮೆ ತೋರಿಸಲಾಗಿ ಸಾಕ್ಷಿಯು ಅದರ ಮೇಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.10 ಎಂದು ಗುರುತಿಸಲಾಯಿತು. ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ.10(ಎ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಅಂದಾಜು 1 ½ ವರ್ಷದ ಹಿಂದೆ ಭೀ-ಗುಡಿ ಠಾಣೆಯಲ್ಲಿ ಪೊಲೀಸರು ಹೇಳಿದ ಮೇರೆಗೆ ಮಾಡಿರುತ್ತೇನೆ. ನಿ.ಪಿ.10 ರಲ್ಲಿ ಬರೆದಿರುವ ವಿಷಯ ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಪೊಲೀಸರು ಯಾವುದೇ ಪಂಚನಾಮೆಯನ್ನು ಮಾಡಿರುವುದಿಲ್ಲ.

**(ಈ ಹಂತದಲ್ಲಿ ಸ.ಸ.ಅ. ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದರು. ಅನುಮತಿ ಕೊಟ್ಟಿದೆ)**

**ಪಾಟೀ ಸವಾಲುಃ ಸ.ಸ.ಅ. ರವರಿಂದಃ**

3. ದಿಃ 17-08-2020 ರಂದು ಮದ್ಯಾಹ್ನ 2.45 ಗಂಟೆ ಸಮಯದಲ್ಲಿ ನನಗೆ ಪೊಲೀಸರು ಕರೆದು 3 ನೇ ಆರೋಪಿ ಶ್ರೀಮತಿ ಸುಜಾತಾ ಇವರ ಮನೆಯಲ್ಲಿ ಪಂಚನಾಮೆ ಮಾಡಲು ಹೋಗಲು ಬರುವಂತೆ ಕರೆದಿದ್ದರು ಎಂದರೆ ಸಾಕ್ಷಿಯು ನನಗೆ ಪೊಲೀಸ್ ಠಾಣೆಯಲ್ಲಿ ಪಂಚನಾಮೆಗೆ ಸಹಿ ಮಾಡಲು ಕರೆದಿದ್ದರು ಎಂದು ಹೇಳುತ್ತಾರೆ. ನಂತರ ನನಗೆ ಮತ್ತು ಚಾಸಾ5 ರವರಿಗೆ ಪೊಲೀಸರು 3 ನೇ ಆರೋಪಿತರ ಮನೆಗೆ ಪಂಚನಾಮೆ ಮಾಡಲು ಕರೆದುಕೊಂಡು ಹೋದರು ಎಂದರೆ ಸರಿ. ಅಲ್ಲಿ ಪೊಲೀಸರು ಚೀಲ ಹೊಲೆಯುವ ಒಂದು ಮಶಿನ್ ನ್ನು ಜಪ್ತಿಪಸಿಡಿಕೊಂಡರು ಎಂದರೆ ಸರಿಯಲ್ಲ. ಅಲ್ಲಿ ಪೊಲೀಸರು

ಮಶಿನ್ ಜಪ್ತಿಪಡಿಸಿಕೂಂಡಿದ್ದ ಬಗ್ಗೆ ಪೊಟೊ ತೆಗೆದಿರುತ್ತಾರೆ ಎಂದರೆ ಸಾಕ್ಷಿಯು ಪೊಟೋ ತೆಗೆದಿರುತ್ತಾರೆ ಆದರೆ ಮಶಿನ ನ್ನು ಜಪ್ತಿಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮತ್ತು ಚಾಸಾ 5 ರವರ ಸಮಕ್ಷಮ ಮದ್ಯಾಹ್ನ 2.45 ರಿಂದ 3.15 ರವರಗೆ ಜಪ್ತಿ ಪಂಚನಾಮ ತಯಾರಿಸಿದ್ದರು ಎಂದರೆ ಸರಿಯಲ್ಲ. ಸದರಿ ಪಂಚನಾಮೆಯನ್ನು ಪೊಲೀಸರು ನನಗೆ ಓದಿ ಹೇಳಿದ ನಂತರ ನಾನು ಸ್ತಳದಲ್ಲಿ ಸಹಿ ಹಾಕಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಜಪ್ತಿ ಪಂಚನಾಮೆಯ ಎಲ್ಲಾ ವಿಷಗಳು ಗೊತ್ತಿದ್ದರೂ ಕೂಡ ಆರೋಪಿಗೆ ಸಹಾಯ ಮಾಡಲು ನನ್ನ ಸಮಕ್ಷಮದಲ್ಲಿ ಜಪ್ತಿ ಪಂಚನಾಮೆ ಮಡಿರುವುದಿಲ್ಲ ಎಂದು ಹೇಳಿ ಹಾಗೂ ಚೀಲ ಹೊಲೆಯುವ ಮಶಿನ್ ಜಪ್ತಿಪಡಿಸಿಕೂಂಡಿರುವುದಿಲ್ಲ ಎಂದು ಹೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅದೆ ದಿನ ನನ್ನ ಮತ್ತು ಚಾಸಾ 5 ರವರ ಸಮಕ್ಷಮ ಮದ್ಯಾಹ್ನ 3.20 ರಿಂದ 3.50 ರವರಗೆ 3 ನೇ ಆರೋಪಿತರ ಮನೆಯಲ್ಲಿ ಗುನ್ನಾ ಸ್ತಳದ ಕಚ್ಚಾ ನಕಾಶೆಯನ್ನು ತಯಾರಿಸಿ ಗುನ್ನಾ ಸ್ತಳ ಪಂಚನಾಮೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಪಂಚನಾಮೆಯನ್ನು ಪೊಲೀಸರು ನನಗೆ ಓದಿ ಹೇಳಿದ ನಂತರ ನಾನು ಸ್ತಳದಲ್ಲಿಯೇ ಸಹಿ ಹಾಕಿರುತ್ತೇನೆ ಎಂದರೆಸ ರಿಯಲ್ಲ. ನನಗೆ ಗುನ್ನಾ ಸ್ತಳದ ಪಂಚನಾಮೆಯ ಎಲ್ಲಾ ವಿಷಗಳು ಗೊತ್ತಿದ್ದರೂ ಕೂಡ ಆರೋಪಿರಿಗೆ ಸಹಾಯ ಮಾಡಲು ನನ್ನ ಸಮಕ್ಷಮದಲ್ಲಿ ಗುನ್ನಾ ಸ್ತಳ ಪಂಚನಾಮೆ ಮಡಿರುವುದಿಲ್ಲ ಎಂದು ಹೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟಿ ಸವಾಲು ಆರೋಪಿಗಳ ಪರವಾಗಿಃ-**

4. 3 ನೇ ಆರೋಪಿತರ ಮನೆಗೆ ನನ್ನನ್ನು ಯಾವ ಕಾರಣಕ್ಕಾಗಿ ಪೂಲಪಿಲಸರು ಕರೆದುಕೊಂಡು ಹೋಗಿದ್ದರು ಎಂದು ನನಗೆ ಹೇಳಲು ಆಗುವುದಿಲ್ಲ. ನಿಪಿ.8 ಮತ್ತು 9 ಪೊಟೋಗಳನ್ನು ಯಾವ ಕಾರಣಕ್ಕಾಗಿ ತೆಗೆದಿರುತ್ತಾರೆ ಎಂದು ನನಗೆ ಹೇಳಲು ಆಗುವುದಿಲ್ಲ.

**ಮರು ವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಶಹಾಪೂರ.